ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೧೯ನೇ ನವೆಂಬರ್ ೧೯೯೦, ಕಾರ್ತೀಕ ೨೮, ಶಕ ೧೯೧೨

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೧೦ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದ್ದರು]

ಸಂತಾಪ ಸೂಚನೆ

ಹಾಲಿ ಸದಸ್ಯ ಶ್ರೀ ಗುಜ್ಜಾಲ್ ಹನುಮಂತಪ್ಪನವರ ನಿಧನದ ಪ್ರಯುಕ್ತ.

ಅಧ್ಯಕ್ಷರು.— ಹಾಲಿ ವಿಧಾನಸಭಾ ಸದಸ್ಯರಾದ ಶ್ರೀ ಗುಜ್ಜಾಲ ಹನುಮಂತಪ್ಪ ಅವರು ದಿನಾಂಕ ೧೩-೧೧-೯೦ ರಂದು ನಿಧನ ಹೊಂದಿದರೆಂದು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀಯುತರು ೧೯೮೯ ರ ಒಂಬತ್ತನೇ ವಿಧಾನಸಭೆಗೆ ಹೊಸಪೇಟೆ ಚುನಾವಣಾ ಕ್ಷೇತ್ರದಿಂದ ಆಯ್ಕೆಯಾಗಿ ಸುಮಾರು ಒಂದು ವರ್ಷ ಈ ಸದನದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ್ದಾರೆ. ಹೊಸಪೇಟೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸಿದ ಕೀರ್ತಿ ಇವರದಾಗಿದೆ. ತಳೆದ ತಿಂಗಳ ೨೫ನೇ ತಾರೀಖು ಈ ಸಭೆಯು ಒಂದು ದಿವಸದ ಅಧಿವೇಶನ ಸೇರಿದ್ದ ಸಂದರ್ಭದಲ್ಲಿ ಶ್ರೀ ಹನುಮಂತಪ್ಪನವರ ಹುಟ್ಟಿದ ದಿನ ಎಂದು ಈ ಸದನದ ಪರವಾಗಿ ಹಾಗೂ ನನ್ನ ಪರವಾಗಿ ಅವರನ್ನು ನಾನು ಹಾರ್ದಿಕವಾಗಿ ಅಭಿನಂದಿಸಿದ್ದೆ. ಆದರೆ ವಿಧಿ ಇಷ್ಟು ಬೇಗ ಅವರನ್ನು ನಮ್ಮಿಂದ ಸೆಳೆದುಕೊಳ್ಳುತ್ತದೆ ಎಂಬ ಕಲ್ಪನೆ ನಮ್ಮಲ್ಲಿ ಯಾರಲ್ಲೂ ಇರಲಿಲ್ಲ. ಆದ್ದರಿಂದ ಶ್ರೀ ಹನುಮಂತಪ್ಪ ಅವರ ನಿಧನಕ್ಕೆ ಈ ಸದನ ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸಬೇಕು, ಮಾನ್ಯ ಸದಸ್ಯರು ಒಂದು ನಿಮಿಷ ಎದ್ದುನಿಂತು ಮೌನವನ್ನು ಆಚರಿಸಿ ದಿವಂಗತರ ಆತ್ಮಕ್ಕೆ ಶಾಂತಿ ಕೋರಬೇಕು ಎಂದು ಕೇಳಿಕೊಳ್ಳುತ್ತೇನೆ

(ಸಭೆ ಒಂದು ನಿಮಿಷ ಮೃತರಗೌರವಾರ್ಥ ಎದ್ದು ನಿಂತು ಶ್ರದ್ಧಾಂಜಲಿಯನ್ನು ಸಲ್ಲಿಸಿತು.)

† ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಪಡೆದು ನಾನು ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುತ್ತೇನೆ. ಮೊನ್ನೆಯ ದಿವಸ ತಮ್ಮ ಮನೆಯಲ್ಲಿ ಸದನದ ಕಾರ್ಯಕಲಾಪ ಸಲಹಾ ಸಮಿತಿ ಸಭೆ ಸೇರಿದ್ದಾಗ ಒಂದು ವಿಚಾರವನ್ನು ನಾವೆಲ್ಲರೂ ಸೇರಿ ಮಾತನಾಡಿದ್ದೇವೆ. ಯಾವುದೇ ಸದನದ ಮಾನ್ಯ ಸದಸ್ಯರು ಇರಬಹುದು, ಕೆಲವು ಸಾರಿ ಅಕಾಲ ಮರಣಕ್ಕೆ ತುತ್ತಾಗತಕ್ಕದ್ದು ಕೆಲವುಸಾರಿ ಬಂದುಬಿಡುತ್ತದೆ. ಆ ಸಂದರ್ಭದಲ್ಲಿ ದೂರದ ಸ್ಥಳಗಳಿಗೆ ಪಾರ್ಥಿವ ಶರೀರವನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಕೆಲವು ಸಾರಿ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಗೊತ್ತಾಗುವುದಿಲ್ಲ. ಈ ಬಗ್ಗೆ ಒಂದು ಸರ್ಕಾರಿ ಆದೇಶ ಇದ್ದರೆ, ವಿಷಯ ಗಮನಕ್ಕೆ ಬಂದಾಗ ವ್ಯವಸ್ಥೆ ಮಾಡುವುದಕ್ಕೆ ಉಪಯುಕ್ತವಾಗುತ್ತದೆನ್ನುವ ಅಭಿಪ್ರಾಯಕ್ಕೆ ನಾವೆಲ್ಲರೂ ಆ ದಿವಸ ಬಂದೆವು. ಆ ಪ್ರಕಾರ ಆ ಒಂದು ವಿಚಾರವನ್ನು ಸರ್ಕಾರ ಒಪ್ಪಿ, ಸರ್ಕಾರ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಸದಸ್ಯರು ಮೇಲ್ಮನೆಯವರು ಇರಲಿ, ಕೆಳಮನೆಯವರು ಇರಲಿ, ಸಂಪತ್ತಿನವರು ಇರಲಿ, ಅವರು ಈ ರಾಜ್ಯದವರಾಗಿರಲಿ ಅಥವಾ ಹೊರಗಡೆ ಎಲ್ಲಿಂದಲಾದರೂ ಗೆದ್ದುಬಂದಿರಬಹುದು ಅವರು ಅಕಾಲ ಮರಣಕ್ಕೆ ತುತ್ತಾದ ಪಕ್ಷದಲ್ಲಿ ವ್ಯವಸ್ಥೆ ಮಾಡುವ ಬಗ್ಗೆ ನಾವು ಆ ದಿವಸ ಮಾತನಾಡಿದ್ದೇವೆ. ಸರ್ಕಾರಿ ಖರ್ಚಿನಲ್ಲಿ ವ್ಯವಸ್ಥೆಮಾಡಿ ಅವರ ಪಾರ್ಥಿವ ಶರೀರವನ್ನು ಕಳುಹಿಸಿಕೊಡಬೇಕಾಗುತ್ತದೆ. ಅದನ್ನು ವರ್ಕ್ ಔಟ್ ಮಾಡಿ ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತೇವೆ. ಈ ದಿವಸ ಸಂತಾಪಸೂಚಕ ಕಾರ್ಯಕಲಾಪ ಆದಮೇಲೆ ಸದನದ ಕಾರ್ಯಕಲಾಪಗಳು ಮುಂದೆ ಹೋಗುತ್ತವೆಂಬ ಅಭಿಪ್ರಾಯ ಇದ್ದು, ಅದನ್ನು ಸರ್ಕಾರ ಒಪ್ಪುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೆ, ತಾವು ವ್ಯಕ್ತ ಮಾಡಿದ ಸಂತಾಪಸೂಚನೆಗೆ ಧ್ವನಿಗೂಡಿಸುತ್ತಾ, ಮಾನ್ಯ ಸಭಾನಾಯಕರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಸದನದ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದೆವು. ಆದರೆ ನಡೆದ ಪ್ರಕರಣದ ಬಗ್ಗೆ ಸದನದ ಗಮನಕ್ಕೆ ತರುವ ದೃಷ್ಟಿಯಿಂದ, ರೆಕಾರ್ಡ್‌ನಲ್ಲಿ ಸೇರುವ ದೃಷ್ಟಿಯಿಂದ ಒಂದರಡು ಮಾತುಗಳನ್ನು ಹೇಳುತ್ತೇನೆ. ಸಾಯುವ ಕೊನೇ ನಿಮಿಷದವರೆಗೆ ಶಾಸಕರು. ಸತ್ತಮೇಲೆ ಬೀದಿ ಹೆಣ. ಇದು ಆಗಬಾರದು. ೧೩ನೇ ತಾರೀಖು ರಾತ್ರಿ ಸುಮಾರು ಒಂಬತ್ತೂಕಾಲು ಗಂಟೆ ಸಮಯದಲ್ಲಿ ಗುಜ್ಜಾಲ ಹನುಮಂತಪ್ಪನವರು ನಿಧನರಾದರು. ಹಿಂದೆ ಬಿ. ಎಂ. ಪಾಟೀಲರು ತೀರಿಕೊಂಡಾಗ ಕೂಡ ಸರ್ಕಾರ ನಡೆದುಕೊಂಡ ರೀತಿಯ ಬಗ್ಗೆ ನಾನು ಅಸಮಾಧಾನ ವ್ಯಕ್ತ ಮಾಡಿದ್ದೇನೆ. ತೀರಾ ಹಿಂದುಳಿದ ವರ್ಗಕ್ಕೆ ಸೇರಿದ ಹನುಮಂತಪ್ಪನವರು ಕಳೆದ ಚುನಾವಣೆಯಲ್ಲಿ, ಕಾಂಗ್ರೆಸ್ ಬಿರುಗಾಳಿಗೆ ಕಲ್ಲು ಕೂಡಾ ತೂರಿ ಹೋಗುವ ಸಂದರ್ಭದಲ್ಲಿ ೩೨ ಸಾವಿರ ಮತಗಳ ಭಾರಿ ಅಂತರದ ಬಹುಮತದಿಂದ ಗೆದ್ದು ಬಂದಿದ್ದವರು. ಈಗ ದೂರಸಂಪರ್ಕ ಇಲಾಖೆಯಲ್ಲಿನ ವ್ಯತ್ಯಯದಿಂದಾಗಿ ಸಂಪರ್ಕಸಾಧನಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ ವಿಷಯ ನಮಗೆ ತಡವಾಗಿ ತಿಳಿಯಿತು. ಅವರು ತೀರಿಕೊಂಡ ಮೇಲೆ ರಾತ್ರಿ ೧೨ ಗಂಟೆಗೆ ನನಗೆ ವಿಷಯ ತಿಳಿಯಿತು. ಬೆಳಿಗ್ಗೆ ನಾನು ಪೋಲೀಸ್ ಕಮೀಷನರ್ ರವರಿಗೆ ಫೋನ್ ಮಾಡಿ ಅವರ ಪಾರ್ಥಿವ ಶರೀರವನ್ನು ತೆಗೆದುಕೊಂಡು ಹೋಗುವ ಬಗ್ಗೆ ವ್ಯವಸ್ಥೆ ಮಾಡಿ ಎಂದಿದ್ದಕ್ಕೆ ಆ ಬಗ್ಗೆ ಸರ್ಕಾರಿ ಆಜ್ಞೆ ಆಗಬೇಕೆಂದೂ, ಆದ್ದರಿಂದ ಕೊಡುವುದಕ್ಕೆ ಬರುವುದಿಲ್ಲವೆಂದೂ ಉತ್ತರ ಬಂತು. ಹಾಗಿದ್ದರೆ ಮತ್ತೇನು ಮಾಡುವುದು ಎಂದು ಯೋಚನೆ ಮಾಡಿ ನಾನೇ ಹೋಗಿ ವಿಧಾನ ಸಭಾ ಸದಸ್ಯರ ಕೊಠಡಿಗಳನ್ನು ಹುಡುಕಿ ನೋಡಿದೆ. ಕೊನೆಗೆ ಲೆಜಿಸ್ಲೇಚರ್‌ಗೆ ಸಂಬಂಧಪಟ್ಟವರು ಯಾರು ಇದ್ದಾರೆ ಅವರು ಕಾರನ್ನು ಕೊಡುವುದಕ್ಕೆ ಒಪ್ಪಿಕೊಂಡರು. ಆ ಕಾರು ಬರುವ ಹೊತ್ತಿಗೆ ಪೆಟ್ರೋಲ್ ಅಭಾವ, ಪೆಟ್ರೋಲ್ ಸಿಕ್ಕುವುದಿಲ್ಲವೆಂದಾಯಿತು. ಪೆಟ್ರೋಲ್ತ ತರುವುದಕ್ಕೆಂದು ಪೋಲೀಸರನ್ನು ಜೊತೆಮಾಡಿ ಕಳಿಸಿದ್ದಾಯಿತು. ಅದೂ ತಡವಾದ ನಂತರ ಮತ್ತೆ ಪೋಲೀಸ್ ಅಧಿಕಾರಿಗಳಿಗೆ ದಯಮಾಡಿ ಖಾಸಗೀ ವಾಹನವನ್ನಾದರೂ ಹುಡುಕಿ ಕೊಡಿ ಆದರೆ ಬಾಡಿಗೆಯನ್ನು ಕೊಡುವಂತಹ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳುತ್ತೇನೆಂದು ಹೇಳಿದೆ. ನಾವು ಖಾಸಗಿ ವಾಹನವನ್ನು ಕೇಳಿದರೆ ಅವರಾರೂ ಹೆಣವನ್ನು ಅವರ ಕಾರಿನಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಒಪ್ಪುವುದಿಲ್ಲ. ಕಟ್ಟ ಕಡೆಗೆ ಡೀಸೆಲ್ ವಾಹನವನ್ನು ಕಳಿಸಿದರು. ಆದರೆ ಅದಕ್ಕೆ ಡೀಸೆಲ್ ಇಲ್ಲ. ಡೀಸೆಲ್‌ಗೆಂದು ಸುಮಾರು ಒಂದು ಕಿಲೋ ಮೀಟರ್ ಕ್ಯೂ ಇತ್ತು. ಪುನಃ ಪೋಲೀಸರನ್ನೇ ಡೀಸೆಲ್ ಅನ್ನಾದರೂ ಒದಗಿಸಿಕೊಡಿ ಎಂದು ಪ್ರಾರ್ಥನೆ ಮಾಡಿಕೊಂಡೆವು. ರಾತ್ರಿ ೯ ಗಂಟೆಗೆ ತೀರಿಕೊಂಡ ದೇಹವನ್ನು ಬೆಳಿಗಿನ ಜಾವ ೧೧ ಗಂಟೆಗೆ ಕಾರಿಗೆ ಇಡುವುದಕ್ಕೆ ಸಾಧ್ಯವಾಯಿತು. ಸುಮಾರು ೩೫೦ ಕಿಲೋ ಮೀಟರ್ ದೂರದಿಂದ ಅವರ ಮನೆಯವರು ಬಂದಿದ್ದಾರೆ. ತೀರಾ ಗ್ರಾಮೀಣ ಪ್ರದೇಶದ ಮುಗ್ಧ ಸಾಧ್ವಿ ಹೆಣ್ಣುಮಗಳು ಹನುಮಂತಪ್ಪನವರ ಪತ್ನಿ ಮತ್ತು ಮಕ್ಕಳು ಏನು ಮಾಡಬೇಕೆಂಬುದನ್ನು ತಿಳಿಯದೆ ಅವರು ಅಲ್ಲಿ ಇದ್ದಂತಹ ಪರಿಸ್ಥಿತಿಯನ್ನು ನೋಡಿ ನನಗೆ ಬಹಳ ದುಃಖವಾಯಿತು. ಈ ಸಭೆಯಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು ರಾಜ್ಯಕ್ಕೆ ಮತ್ತು ಜನರ ಸೇವೆಗೆ ಬಂದಂತಹ ಜನರಿಗೆ ಇಂತಹ ಪರಿಸ್ಥಿತಿ ಉಂಟಾಯಿತಲ್ಲಾ ಎಂದು ನನಗೆ ಬಹಳ ದುಃಖವಾಯಿತು. ಜನರ ಸೇವೆಗೆ, ರಾಜ್ಯದ ಸೇವೆಗೆ ಬಂದವರಿಗೆ ಇಂತಹ ಸ್ಥಿತಿ ಆಗಬಾರದು. ಆ ದಿಸೆಯಲ್ಲಿ ಸರಕಾರ ಒಂದು ಆದೇಶವನ್ನು ಹೊರಡಿಸುವುದಕ್ಕೆ ತೀರ್ಮಾನ ಮಾಡಿದೆ. ಇದು ತುಂಬಾ ಸಂತೋಷದ ವಿಚಾರ. ಅವರ ಸಾವಿನ ಜೊತೆಗೆ ನಮಗೆ ಬಹಳ ಹತ್ತಿರ ಇರುವುದು ಮರೆವು. ಆ ಮರೆವು ಬರುವುದಕ್ಕಿಂತ ಮುಂಚೆ ಇದಕ್ಕೆ ಸಂಬಂಧಪಟ್ಟಂತಹ ಆದೇಶವನ್ನು ಹೊರಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ನಮ್ಮೆಲ್ಲರಿಗೂ ಅತ್ಯಂತ ತೀವ್ರವಾದಂತಹ ಒಂದು ದುರ್ಘಟನೆ ಏನೆಂದರೆ, ಹಾಲಿ ವಿಧಾನಸಭಾ ಸದಸ್ಯರಾದಂತಹ ಗುಜ್ಜಾಲ್ ಹನುಮಂತಪ್ಪನವರು ದೈವಾಧೀನರಾಗಿರುವುದು. ಇದು ನಮೆಲ್ಲರಿಗೂ ತುಂಬಾ ನೋವುಂಟು ಮಾಡಿದೆ. ಹಾಲಿ ವಿಧಾನಸಭಾ ಸದಸ್ಯರಾಗಿದ್ದ ಇವರು ಕೃಷಿ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿ ತಾವು ಪ್ರತಿನಿಧಿಸಿದಂತಹ ಹೊಸಪೇಟೆ ಕ್ಷೇತ್ರದ ಜನರ ಅಭಿವೃದ್ಧಿಗೆ ಶ್ರಮಿಸಬೇಕೆಂದು ಅಂದುಕೊಳ್ಳುತ್ತಿರುವ ವರ್ಷಗಳಲ್ಲಿ ಒಂದು ವರ್ಷದ ಒಳಗಾಗಿ ಈ ರೀತಿ ವಿಧಿಯ ಆಟಕ್ಕೆ ತುತ್ತಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೋರಿ ಅವರ ಕುಟುಂಬದವರಿಗೆ ಈ ನೋವನ್ನು ತಡೆದುಕೊಳ್ಳುವಂತಹ ಶಕ್ತಿಯನ್ನು ಭಗವಂತನು ಅವರಿಗೆ ನೀಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರದ ಕಡೆಯಿಂದ ಒಂದು ಒಳ್ಳೆಯ ಸತ್‌ಸಂಪ್ರದಾಯವನ್ನು ಹಾಕುವುದಕ್ಕೆ ಹೊರಟಿದ್ದಾರೆ, ಈ ರೀತಿ ಹಾಲಿ ಗೌರವಾನ್ವಿತ

ಸದಸ್ಯರು ನಿಧನರಾದಂತಹ ಸಂದರ್ಭದಲ್ಲಿ ಸದನವನ್ನು ಮುಂದೂಡಿ ಅವರಿಗೆ ಗೌರವ ಸಲ್ಲಿಸುವಂಥಾದ್ದು ಏನು ಇದೆ ಇದು ನಿಜಕ್ಕೂ ಒಂದು ಒಳ್ಳೆಯ ಸತ್ಸಂಪ್ರದಾಯ. ಲೋಕಸಭೆಯಲ್ಲೂ ಕೂಡ ಇದೇ ವಾಡಿಕೆ ಇದೆ. ಆದರೆ ಮುಂದೆ ಆ ರೀತಿಯ ಕೆಟ್ಟ ದಿವಸಗಳು ಬರದಿರುವುದು ಬೇಡವೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ವಿಧಿಯ ಆಟಕ್ಕೆ ಯಾರೂ ದೊಡ್ಡವರಲ್ಲ. ಈ ರೀತಿ ಹಾಲಿ ಸದಸ್ಯರು ಬೇರೆ ಯಾವುದಾದರೂ ಸ್ಥಳದಲ್ಲಿ ದೈವಾಧೀನರಾದರೆ ಅವರ ಸ್ವಂತ ಸ್ಥಳಕ್ಕೆ ಸಕಲ ಗೌರವದಿಂದ ಅವರ ಮೃತ ದೇಹವನ್ನು ತಲುಪಿಸುವಂತಹ ವ್ಯವಸ್ಥೆ ಮಾಡಬೇಕೆಂಬ ವಿಷಯವನ್ನು ಮಾನ್ಯ ಸಭಾನಾಯಕರು ಹೇಳಿರುವಂಥಾದ್ದು ಏನು ಇದೆ ಅದು ಬದಲ ಒಳ್ಳೆಯ ವಿಚಾರ. ಅವರು ಒಳ್ಳೆಯ ಯೋಚನೆ ಮಾಡಿದ್ದಾರೆ. ನನ್ನ ಮತ್ತು ನಮ್ಮ ಪಕ್ಷದ ಪರವಾಗಿ ಗುಜ್ಜಾಲ್ ಹನುಮಂತಪ್ಪನವರ ಸಾವಿನಿಂದುಂಟಾದ ನೋವನ್ನು ಭರಿಸುವಂತಹ ಶಕ್ತಿಯನ್ನು ದೇವರು ಅವರ ಕುಟುಂಬ ವರ್ಗದವರಿಗೆ ನೀಡಲಿ ಎಂದು ಪ್ರಾರ್ಥನೆ ಮಾಡುತ್ತಾ, ನನಗೆ ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ತಾವು ಕಳೆದ ತಿಂಗಳು ೨೫ರಂದು ಗುಜ್ಜಾಲ್ ಹನುಮಂತಪ್ಪನವರ ಹುಟ್ಟಿದ ದಿನವೆಂದು ಪ್ರಕಟಿಸಿ ಅವರನ್ನು ಹಾರ್ದಿಕವಾಗಿ ಅಭಿನಂದಿಸಿದ್ದೆ ಎಂದು ಹೇಳಿದಾಗ ನಮಗೆಲ್ಲರಿಗೂ ನೋವು ಮತ್ತು ವೇದನೆಯಾಯಿತು. ಇವತ್ತು ಅವರು ನಮ್ಮ ಮುಂದೆ ಇಲ್ಲ. ಅವರ ಪಾರ್ಥಿವ ಶರೀರವನ್ನು ಅವರ ಸ್ವಗ್ರಾಮಕ್ಕೆ ಕಳುಹಿಸಬೇಕಾದರೆ ಆದ ಅವ್ಯವಸ್ಥೆಯನ್ನು ತಾವು ಅರಿತಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳು ಅರಿತಿದ್ದಾರೆ ಹಾಗೂ ವಿರೋಧಪಕ್ಷದ ನಾಯಕರು ಅರಿತಿದ್ದಾರೆ. ಈಗ ಸರ್ಕಾರ ಹೊಸ ಸಂಪ್ರದಾಯವನ್ನು ಹಾಕಿದೆ. ಇದರ ಜೊತೆಗೆ ಕೆಲವು ಸಲಹೆಗಳನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೊಡುತ್ತಿದ್ದೇನೆ. ಯಾವುದೇ ಸದಸ್ಯರು ಇಲ್ಲಿ ನಿಧನ ಹೊಂದಿದರೆ ಅವರ ಶವಸಂಸ್ಕಾರ ಇತರೆ ಎಲ್ಲ ವ್ಯವಸ್ಥೆಯನ್ನು ಸರ್ಕಾರವೇ ಮಾಡತಕ್ಕ ಪರಿಪಾಠವನ್ನು, ಸಂಪ್ರದಾಯವನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಸದನದಲ್ಲಿರುವಂತಹ ಸದಸ್ಯರು ಯಾರೇ ಸತ್ತರೂ ಅವರಿಗೆ ಕನಿಷ್ಟ ೫ಲಕ್ಷ ರೂಪಾಯಿಗಳನ್ನು ಸರ್ಕಾರದ ವತಿಯಿಂದ ಕೊಡಬೇಕೆಂದು ನಾನು ಹೇಳುತ್ತೇನೆ. ಅನೇಕ ಜನ ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕವರಿಗೆ ಇಂತಹ ಪರಿಸ್ಥಿತಿ ಇರುತ್ತದೆ. ನಾನು ಅನೇಕ ಜನರ ಪರಿಸ್ಥಿತಿಯನ್ನು ನೋಡಿದ್ದೇನೆ. ಕೊನೆಗೆ ಅವರ ಶವಸಂಸ್ಕಾರ ಮಾಡುವುದಕ್ಕೆ ಸಹ ತೊಂದರೆಯಾಗಿದೆ. ಮುಂದೆ ಇಂತಹ ಪರಿಸ್ಥಿತಿ ಉದ್ಭವವಾಗಬಾರದೆಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇಂತಹ ಪರಿಸ್ಥಿತಿಯಲ್ಲಿ ಅವರ ಶವಸಂಸ್ಕಾರವನ್ನು ಮಾಡತಕ್ಕ ವ್ಯವಸ್ಥೆಯನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ. ಗುಜ್ಜಾಲ್ ಹನುಮಂತಪ್ಪನವರ ಆತ್ಮಕ್ಕೆ ಶಾಂತಿ ದೊರಕಲಿಯೆಂದು ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ,

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಅಧ್ಯಕ್ಷರೆ, ಗುಜ್ಜಾಲ್ ಹನುಮಂತಪ್ಪನವರು ಹಿರಿಯ ಸದಸ್ಯರಿದ್ದರು. ಅವರು ತೀರಿಕೊಂಡಿರುವುದರಿಂದ ವಿರೋಧಪಕ್ಷಕ್ಕೆ ಅಘಾತವಾಗಿದೆ. ಅವರು ಯಾವಾಗಲೂ ನಗುನಗುತ್ತಾ ಇದ್ದರು, ಇತ್ತಕಡೆಯಿಂದ ಬಗುವವರಿಗೆ ಅಡಿಕೆ, ಲವಂಗವನ್ನು ತಿನ್ನಲಿಕ್ಕೆ ಕೊಡುತ್ತಿದ್ದರು, ಅವರು ಯಾವಾಗಲೂ ಇಲ್ಲಿ ಸಂತೋಷದಿಂದ ಕುಳಿತಿರುತ್ತಿದ್ದರು, ಅವರ ನಿಧನಕ್ಕೆ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಅವರ ಕುಟುಂಬದವರು ಬಹಳ ಕಷ್ಟದಲ್ಲಿರುವುದರಿಂದ ಎಲ್ಲ ಸದಸ್ಯರು ಮತ್ತು ಮಂತ್ರಿಗಳು ಅವರ ಒಂದು ತಿಂಗಳ ವೇತನವನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅದೇ ರೀತಿ ಸರ್ಕಾರ ಕೂಡ ಅವರ ಕುಟುಂಬ ವರ್ಗಕ್ಕೆ ಹಣ ಸಹಾಯ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೇ, ಗುಜ್ಜಾಲ್ ಹನುಮಂತಪ್ಪನವರ ನಿಧನದ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ, ದಯವಿಟ್ಟು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಎಲ್ಲರೂ ಮಾತನಾಡಿದ್ದಾರೆ.

ಶ್ರೀ ಎಸ್. ಹೆಚ್. ಕೌಜಲಗಿ.—ಗುಜ್ಜಾಲ್ ಹನುಮಂತಪ್ಪನವರ ನಿಧನದ ಬಗ್ಗೆ ಈಗಾಗಲೇ ಎಲ್ಲ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಒಂದೇ ಒಂದು ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಮುಖ್ಯವಾಗಿ ಗುಜ್ಜಾಲ್ ಹನುಮಂತಪ್ಪನವರು ನಗರದ ಬೋರಿಂಗ್ ಆಸ್ಪತ್ರೆಯಲ್ಲಿ ತೀರಿಕೊಂಡರು. ಅವರ ಹೆಣವನ್ನು ಊರಿಗೆ ಒಯ್ಯುತ್ತಾರೆಂದು

ಗೊತ್ತಿದ್ದರೂ ಸಹಿತ. ತೀರಿಕೊಂಡ ನಂತರ ಕೊಡುವಂತಹ ಇಂಜೆಕ್ಷನ್ ಬೌರಿಂಗ್ ಆಸ್ಪತ್ರೆಯಲ್ಲಿರಲಿಲ್ಲ. ಅದನ್ನು ಕೇಳಿದರೆ ವಿಕ್ಟೋರಿಯಾ ಆಸ್ಪತ್ರೆಯಿಂದ ನೀವೇ ಯಾರಾದರೂ ತಂದು ಕೊಡಬೇಕೆಂದು ಹೇಳುತ್ತಿದ್ದರು. ಅದಕ್ಕೊಸ್ಕರ ಈ ವಿಚಾರವನ್ನು ಹೇಳುವಂತಹ ಪ್ರಸಂಗ ಬಂತು. ಏಕೆಂದರೆ, ಇಂತಹ ದೊಡ್ಡ ಆಸ್ಪತ್ರೆಯಲ್ಲಿ ಸತ್ತಮೇಲೆ ಕೊಡುವಂತಹ ಇಂಜೆಕ್ಷನ್ ಇಲ್ಲವೆಂದು ಹೇಳಿದರೆ, ಅದರಲ್ಲೂ ರಾಜಧಾನಿಯಲ್ಲಿ ತೀರಿಕೊಂಡರೆ ಇಂತಹ ಪರಿಸ್ಥಿತಿ ಆದರೆ ಹೇಗೆ ? ಸಿಟ್ಟಿಂಗ್ ಎಂ.ಎಲ್.ಎ. ಒಬ್ಬರು ತೀರಿಕೊಂಡಾಗ ಯಾರಾದರೂ ಒಬ್ಬರು ಮಂತ್ರಿಗಳು ಬಂದು ನೋಡುವಂತಹ ಸೌಜನ್ಯವನ್ನು ತೋರಿಸಲಿಲ್ಲ. ಹೆಣವನ್ನು ಒಯ್ಯಲಿಕ್ಕೆ ಎರಡು-ಮೂರು ದಿವಸಗಳಾದರೂ ಕನಿಕರಪಟ್ಟು ಯಾರೂ ಬರಲಿಲ್ಲ, ಇರುವತನಕ ಶಾಸಕರು, ಸತ್ತ ನಂತರ ನಾಯಿಪಾಲು ಎನ್ನುವ ಶಬ್ದವನ್ನು ಮಾನ್ಯ ವಿರೋಧಪಕ್ಷದ ನಾಯಕರು ಉಪಯೋಗ ಮಾಡಿದರು, ಅದು ನಿಜ, ಸ್ವತ್ಯವಿದೆ ಕೆಣವನ್ನು ಅವರ ಊರಿಗೆ ಒಯ್ಯಲಿಕ್ಕೆ ಎಷ್ಟು ತ್ರಾಸ ಆಯಿತು ಎನ್ನುವುದು ನಮಗೆ ಗೊತ್ತು. ಸರ್ಕಾರದ ಕಡೆಯಿಂದ ವ್ಯವಸ್ಥೆ ಮಾಡಲಿಲ್ಲ, ಲೆಜಿಸ್‌ಲೇಚರ್‌ನವರು ಸಹಿತ ಕ್ವಿಕ್ ಆಗಿ ಒಂದು ವೆಹಿಕಲ್ ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡಲಿಲ್ಲ. ಗುಜ್ಜಾಲ್ ಹನುಮಂತಪ್ಪನವರು ಹಿಂದೆ ಮುನಿಸಿಪಾಲಿಟಿ ಅಧ್ಯಕ್ಷರಾಗಿದ್ದರು, ಸಾರ್ವಜನಿಕ ಕ್ಷೇತ್ರದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರು ಬೇಡರ ಕಮ್ಯುನಿಟಿಯವರು, ಅಂತಹವರು ೩೨ ಸಾವಿರ ಹೆಚ್ಚಿಗೆ ಓಟು ತೆಗೆದುಕೊಂಡು ಅಸೆಂಬ್ಲಿಗೆ ಆರಿಸಿ ಬಂದಿದ್ದರು ಅಂದರೆ ಅವರ ವರ್ಕಸ್ ಎಷ್ಟಿತ್ತೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಅವರಿಗೆ ಗಂಡುಮಕ್ಕಳು ಇರಲಿಲ್ಲ. ಒಬ್ಬಳೇ ಒಬ್ಬಳು ಹೆಣ್ಣುಮಗಳು. ಅವರ ಹೆಂಡತಿಯನ್ನು ನೋಡಿದರೆ ಅವರು ಶಾಸಕರ ಹೆಂಡತಿಯೆಂದು ಗೊತ್ತಾಗುತ್ತಿರಲಿಲ್ಲ. ಶಾಸಕರು ಸತ್ತರೆ ಸರ್ಕಾರದ ಪರವಾಗಿ ಮಂತ್ರಿಗಳು ಬಂದು ನೋಡುವಂತಹ ಸೌಜನ್ಯವನ್ನು ತೋರಿಸಬೇಕು. ಆವೊಂದಂ ಹ್ಯುಮಾನಿಟಿ ಕನ್ಸೀಡರೇಷನ್ ತೋರಿಸಬೇಕು. ಆ ರೀತಿ ಮಾಡಲೇಬೇಕೆಂದು ನಾನು ಹೇಳುತ್ತಿಲ್ಲ. ಆವೊಂದು ಸಂಪ್ರದಾಯವನ್ನು ಸರ್ಕಾರದವರು ಹಾಕಿಕೊಳ್ಳಬೇಕು. ದವಾಖಾನೆಯಲ್ಲಿ ಸತ್ತನಂತರ ಕೊಡುವಂತಹ ಇಂಜಕ್ಷನ್ ಕೊಡುವಂತಹ ವ್ಯವಸ್ಥೆ ಮಾಡಬೇಕು. ಬೌರಿಂಗ್ ಆಸ್ಪತ್ರೆಯಲ್ಲಿ ಹೆಣಕ್ಕೆ ಇಂಜಕ್ಷನ್ ಕೊಡದೆ ಕಳುಹಿಸಿದ್ದಾರೆ. ಆದರ ಬಗ್ಗೆ ತನಿಖೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಂಡು ಗುಜ್ಜಾಲ್ ಹನುಮಂತಪ್ಪನವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ನೀಡಲಿಯೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾಹಿತಿಗಳನ್ನು ಸರಿಯಾದ ರೀತಿಯಲ್ಲಿ ಇಡಬೇಕಾಗಿರತಕ್ಕಂಥಾದ್ದು ನನ್ನ ಕರ್ತವ್ಯ. ಶ್ರೀ ಹನುಮಂತಪ್ಪನವರು ೧೨ ತಾರೀಕಿನಂದು ಬೌರಿಂಗ್ ಆಸ್ಪತ್ರೆಗೆ ಸೇರಿಸಲ್ಪಟ್ಟರು ಮಾನ್ಯ ಶ್ರೀ ಕೆ. ಹೆಚ್. ಪಾಟೀಲರು ಒಂದು ವಿಸಿಟಿಂಗ್ ಕರೆದಿದ್ದರಂತೆ. ಆ ಮೀಟಿಂಗ್‌ನಲ್ಲಿ ಅವರಿಗೆ ತಲೆಸುತ್ತು ಬಂದು ತಕ್ಷಣ ಅವರನ್ನು ಬೌರಿಂಗ್ ಆಸ್ಪತ್ರೆಗೆ ಚಿಕಿತ್ಸೆಗೋಸ್ಕರ ಸೇರಿಸಲಾಯಿತು ಎಂದು ತಿಳಿದುಬಂತು. ಮಾರನೇ ದಿವಸ ರಾತ್ರಿ ಹತ್ತೂವರೆ-ಹನ್ನೊಂದು ಗಂಟೆಯಷ್ಟು ಹೊತ್ತಿಗೆ ಅವರ ಸ್ಥಿತಿ ಬಹಳ ವಿಷಾದನೀಯವಾಯಿತು. ಅದಕ್ಕಿಂತ ಮೊದಲೇ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ವೀರಪ್ಪ ಮೊಯಿಲಿಯವರು ಹೋಗಿ ಶ್ರೀ ಹನುಮಂತಪ್ಪನವರನ್ನು ವಿಚಾರಿಸಿಕೊಂಡು ಬಂದಿದ್ದರು. ನಾನು ತಾರೀಖು ೧೨ ಮತ್ತು ೧೩ ರಂದು ಊರಿನಲ್ಲಿ ಇರಲಿಲ್ಲ. ೧೪ನೇ ತಾರೀಕಿಗೆ ನಾನು ಬಂದೆ. ೧೨ ಗಂಟೆಯಷ್ಟು ಹೊತ್ತಿಗೆ ಬೆಂಗಳೂರಿಗೆ ಬಂದಾಗ ನನಗೆ ವರ್ತಮಾನ ತಿಳಿಯಿತು. ಆಷ್ಟರಲ್ಲಿ ನಾನು ಶಾಸಕರ ಭವನಕ್ಕೆ ಫೋನ್ ಮಾಡಿ ವಿಚಾರಿಸಿದಾಗ ಹನ್ನೊಂದುಕಾಲು ಗಂಟೆಯಷ್ಟು ಹೊತ್ತಿಗೆ ಅವರ ಪಾರ್ಥಿವ ಶರೀರವನ್ನು ಬಳ್ಳಾರಿಗೆ ತೆಗೆದುಕೊಂಡು ಹೋಗಲಾಯಿತು ಎಂದು ನನಗೆ ವರದಿ ಬಂದಿತು. ಆದ್ದರಿಂದ ನಾನು ಅವರ ಅಂತಿಮ ದರ್ಶನವನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಜೊತೆಗೆ ನಮ್ಮ ವಿಧಾನ ಮಂಡಲ ಸಚಿವಾಲಯದ ಎರಡು ಕಾರುಗಳನ್ನು ಅವರ ಪಾರ್ಥಿವ ಶರೀರವನ್ನು ಸಾಗಿಸುವುದಕ್ಕೆ ಕಳಿಸಿಕೊಟ್ಟರು ಎಂದು ನನಗೆ ವರದಿಯನ್ನು ಒಪ್ಪಿಸಿದ್ದಾರೆ. ಈ ಎಲ್ಲ ವಿಚಾರಗಳನ್ನು ಕೂಡ ಮುಖ್ಯಮಂತ್ರಿಗಳು ಈಗಾಗಲೇ ಸಭೆಗೆ ತಿಳಿಸಿದ ರೀತಿಯಲ್ಲಿ ಇದಕ್ಕೆ ಕೆಲವು ಸ್ಟ್ಯಾಂಡರ್ಡ್ ಪ್ರಾಸೀಜರ್ಸ್ ಎನ್ನು ನಾವು ಅಡಾಪ್ಟ್ ಮಾಡಿಕೊಳ್ಳಬೇಕಾಗಿದೆ. ಬಹಳ ತುರ್ತಾಗಿ ಆದನ್ನು ಆದಷ್ಟು ಶೀಘ್ರದಲ್ಲಿ ಸರ್ಕಾರಿ ಆಜ್ಞೆಯ ಮೂಲಕ ಮ್ಯಾಂಡೇಟರಿ ಮಾಡುತ್ತೇನೆ ಎಂದು ನನಗೆ ನಂಬಿಕೆ

ಇದೆ. ಮೊನ್ನೆ ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಕೂಡ ಅವರು ಈ ಆಶ್ವಾಸನೆಯನ್ನು ಮಾಡಿದ್ದರು. ಆದನ್ನು ಸಭೆಯಲ್ಲಿ ಕೂಡ ದೃಢೀಕರಿಸಿದ್ದಾರೆ. ಮಾನ್ಯ ಕಾಜಲಗಿಯವರು ಬೌರಿಂಗ್ ಆಸ್ಪತ್ರೆಯಲ್ಲಿ ಅವರಿಗೆ ಸರಿಯಾದಂಥ ಔಷಧಿ ಸಿಗಲಿಲ್ಲ ಎಂದು ಹೇಳಿದರು...

ಶ್ರೀ ಎಸ್. ಹೆಚ್. ಕಾಜಲಗಿ.—ನಾನು ಹೇಳಿದ್ದು ಬಾಡಿ ಪ್ರಿಸರ್ವೇಶನ್ ಬಗ್ಗೆ ..

ಅಧ್ಯಕ್ಷರು.—ಅದನ್ನು ಇರಿಸಲಿಕ್ಕೆ ಏನು ಔಷಧಿ ಬೇಕೋ ಅದು ಆಸ್ಪತ್ರೆಯಲ್ಲಿ ಇರಲಿಲ್ಲ ಎನ್ನುತಕ್ಕಂಥ ವಿಚಾರ ಹೇಳಿದರು. ಮಾನ್ಯ ಆರೋಗ್ಯ ಮಂತ್ರಿಗಳು ಅದರ ಬಗ್ಗೆ ಸಂಬಂಧಪಟ್ಟವರೊಡನೆ ಚರ್ಚೆಮಾಡಿ ಅದಕ್ಕೆ ಪರಿಹಾರವನ್ನು ಕಂಡುಹಿಡಿಯುತ್ತಾರೆ.

ಶ್ರೀಮತಿ ಕೆ. ಎಸ್ ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—ಅದನ್ನು ನಾನು ವಿಚಾರಣೆ ಮಾಡಿಸುತ್ತೇನೆ.

† ಶ್ರೀ ಕೆ. ಹೆಚ್. ರಂಗನಾಥ್.—ಸರ್ಕಾರ ನಮ್ಮ ಅಭಿಪ್ರಾಯಗಳನ್ನು ಗಮನಿಸಬೇಕು ಎಂದು ಪ್ರಸ್ತಾಪ ಮಾಡಿದ ಹಾಗೆ ನನಗೆ ಕೇಳಿಸಿತು. ವಿಧಾನಸಭೆಯ ಸದಸ್ಯರಾಗಿ ನಾವು ತಮ್ಮ ಅಧೀನದಲ್ಲಿದ್ದೇವೆ. ನಮ್ಮ ಹೆಣ ಕೂಡ ತಮ್ಮ ಅಧೀನಕ್ಕೆ ಬರುತ್ತದೆ. ಸರ್ಕಾರದ ಶಕ್ತಿ ನಮ್ಮನ್ನು ಕೊಡುವುದಾದರೆ ಸ್ವಲ್ಪ ಕಷ್ಟವಾಗುತ್ತದೆ ಯಾರು ಇರುತ್ತಾರೆ, ಯಾರು ಇರುವುದಿಲ್ಲ, ಏನೇನು ಆಗುತ್ತದೆ ಎಂದು ಗೊತ್ತಿಲ್ಲ. ಆದ್ದರಿಂದ ಸ್ಟ್ಯಾಂಡರ್ಡ್ ನಾರ್ಮ್ಸ್ ಪ್ರಿಸ್ಕ್ರೈಬ್ ಮಾಡಬೇಕು ಎಂದು ತಾವು ಸರ್ಕಾರಕ್ಕೆ ಸಲಹೆ ಮಾಡ್ತಿದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ಪೂರ್ತಿಯಾಗಿ ಕೇಳಲಿಲ್ಲ. ಸ್ಟ್ಯಾಂಡರ್ಡ್ ನಾರ್ಮ್ಸ್ ಬಗ್ಗೆ ತಾವೇನು ಸದನಕ್ಕೆ ತಿಳಿಸಿದ್ದೀರಿ, ಅದನ್ನು ವಿಧಾನ ಮಂಡಲದ ಅಧ್ಯಕ್ಷರಾಗಿ ತಾವೇ ಮಾಡಿಕೊಡತಕ್ಕದ್ದು ಸೂಕ್ತವೆಂದು ನನ್ನ ಸಲಹೆ. ಏಕೆಂದರೆ, ಅದಿನ್ನೂ ಪೂರ್ಣ ಆಗಿಲ್ಲ. ಆದ್ದರಿಂದ ನನ್ನ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

† ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳ ಹಿಂದೆ ಅಕಾಲಿಕ ನಿಧನಹೊಂದಿದಂಥ ಶ್ರೀ ಹನುಮಂತಪ್ಪನವರ ಕುಟುಂಬದ ಆರ್ಥಿಕ ಪರಿಸ್ಥಿತಿ ಬಗ್ಗೆ ನಾನು ಮಾತನಾಡುತ್ತೇನೆ. ನಾನು ಅವರ ಪಕ್ಕದ ಕ್ಷೇತ್ರದ ಶಾಸಕ. ಶ್ರೀ ವಾಟಾಳ್ ನಾಗರಾಜ್ ಅವರು ಏನು ಸಲಹೆಯನ್ನು ಕೊಟ್ಟರು, ಅದನ್ನು ಎಲ್ಲರಿಗೂ ಅನ್ವಯಿಸುವ ಹಾಗೆ ಮಾಡಲಿಕ್ಕೆ ಆಗುವುದಿಲ್ಲ. ಅವರ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಆವರೆ ಶ್ರೀ ಹನುಮಂತಪ್ಪನವರ ಪಕ್ಕದ ಕ್ಷೇತ್ರದ ಶಾಸಕನಾಗಿ ಅವರ ಕುಟುಂಬದ ಆರ್ಥಿಕ ಸ್ಥಿತಿ ಬಗ್ಗೆ ನನಗೆ ಸಮಾಧಾನಕರವಾಗಿ ಚೆನ್ನಾಗಿ ಗೊತ್ತಿದೆ. ಅವರ ಮನೆ ಎಷ್ಟು ಇದೆ ಎಂದರೆ, ವಿಧಾನಸಭೆಯ ಈ ಪ್ರೆಸ್ ಗ್ಯಾಲರಿಯಷ್ಟು ಇದೆ. ಅವರಿಗೆ ಒಬ್ಬಳೇ ಹೆಣ್ಣುಮಗಳಿದ್ದಾರೆ. ಬಹಳ ಹಿಂದುಳಿದ ವರ್ಗಕ್ಕೆ ಸೇರಿದ ಅಂದರೆ ವಾಲ್ಮೀಕಿ ಸಮಾಜಕ್ಕೆ ಸೇರಿದ ಅವರ ಆರ್ಥಿಕ ಪರಿಸ್ಥಿತಿ ಬಹಳ ಕೆಳಮಟ್ಟದಲ್ಲಿದೆ. ಅವರಿಗೆ ಜಮೀನು ವಗೈರೆ ಕೂಡ ಇಲ್ಲ. ನನಗೆ ಗೊತ್ತಿದ್ದ ಮಟ್ಟಿಗೆ ಆವರಿಗೆ ಎಲ್.ಐ.ಸಿ ಪಾಲಿಸಿ ಕೂಡ ಇರಲಿಕ್ಕಿಲ್ಲ. ಅಂತಹ ಒಬ್ಬ ಮುಂಗ್ಡ ಮನುಷ್ಯರಾಗಿದ್ದರು ಅವರು. ಆ ಹೆಣ್ಣು ಮಗಳು ಮುಖ್ಯಮಂತ್ರಿಗಳು ಯಾರು, ವಿರೋಧ ಪಕ್ಷದ ನಾಯಕರು ಯಾರು ಎಂದು ತಿಳಿಯದಷ್ಟು ಮುಂಗ್ಡ ಹೆಣ್ಣುಮಗಳು. ಬಹುಶಃ ಬೇರೆ ಬೇರೆ ಆಪಘಾತದಲ್ಲಿ ಸತ್ತಂಥವರಿಗೆ ಒಂದು ಲಕ್ಷ ರೂಪಾಯಿಗಳನ್ನು ತಾವು ಕೊಡುತ್ತೀರಿ. ಶಾಸಕರಾಗಿ ಆರ್ಥಿಕ ಪರಿಸ್ಥಿತಿಯಲ್ಲಿ ಅತ್ಯಂತ ಕೆಳಗಿರುವ ಇವರು, ತುಂಬಾ ಕಡಿಮೆ ಜಮೀನು ಇರತಕ್ಕಂಥ ಸ್ಮಾಲ್ ಹೋಲ್ಡರ್ ಆಗಿದ್ದರು. ಮಾನ್ಯ ಬಂಗಾರಪ್ಪನವರು ಹಿಂದುಳಿದ ವರ್ಗದ ಮುಖ್ಯಮಂತ್ರಿಗಳಾಗಿದ್ದಾರೆ. ದಯವಿಟ್ಟು ಹಿಂದುಳಿದ ವರ್ಗದ ಒಬ್ಬ ಸದಸ್ಯರಿಗೆ ಕನಿಷ್ಟಪಕ್ಷ ಒಂದು ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿ ಕೊಟ್ಟರೆ ಬಹಳ ಸಂತೋಷವೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ದಯಮಾಡಿ, ಇದರ ಬಗ್ಗೆ ಕ್ರಮ ಕೈಗೊಂಡು ಅನುಕೂಲ ಮಾಡಿ ಕೊಡುತ್ತೀರೆಂದು ಭಾವಿಸಿರುತ್ತೇನೆ.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜಂಟ್ಟಲ್ (ಕುಂದಗೋಳ್).—ಮಾನ್ಯ ಅಧ್ಯಕ್ಷರೇ, ಮೊನ್ನೆತಾನೆ ನಾವು ಹಿರಿಯರಾದ ಮಾನ್ಯ ಶ್ರೀ ಗುಜ್ಜಾಲ್ ಹನುಮಂತಪ್ಪನವರ ಹುಟ್ಟು ಹಬ್ಬದ ಸಂತೋಷವನ್ನು ಆಚರಿಸಿದ ಸಂದರ್ಭದಲ್ಲಿ. ವಿಧಿ ಹನುಮಂತಪ್ಪನವರನ್ನು ಸೆಳೆದುಕೊಂಡಿದ್ದನ್ನು

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದೂ ಸೂಚಿಸುತ್ತದೆ.)

ನೋಡಿದರೆ, ಒಬ್ಬ ಹಿರಿಯ ಹಿಂದುಳಿದ ವರ್ಗದ ನಾಯಕನನ್ನು ನಾವು ಕಳೆದುಕೊಂಡಂತಾಗಿದೆ. ವಿಶೇಷತಃವಾಗಿ, ಅದೂ ಕೂಡ ಕರ್ನಾಟಕ ರಾಜ್ಯದಲ್ಲಿ ವಾಲ್ಮೀಕಿ, ನಾಯಕ ಸಮಾಜದ ಒಬ್ಬ ಧುರೀಣನನ್ನು ಕಳೆದುಕೊಂಡು, ಇಡೀ ರಾಜ್ಯದ ನಮ್ಮ ಸಮಾಜ ದುಃಖದ ಪರಿಸ್ಥಿತಿಯಲ್ಲಿರುವಾಗ, ಭಗವಂತನು ಅವರ ಕುಟುಂಬಕ್ಕೆ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತೇನೆ. ಅವರ ನಿಧನದಿಂದ ಕಳೆದುಕೊಂಡ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ಭಗವಂತನು ಅವರಿಗೆ ಕೊಡಲಿ ಎಂದು ಹಾರೈಸಿ, ಈ ಮೂಲಕ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಅಧ್ಯಕ್ಷರು.—ಮೃತರ ಗೌರವಾರ್ಥವಾಗಿ, ಈ ಸಭೆಯನ್ನು ನಾಳೆ ೧೧ ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಬೆಳಿಗ್ಗೆ ೧೦-೫೭ಕ್ಕೆ ಮುಕ್ತಾಯವಾಗಿ, ಮತ್ತೆ ತಾ. ೨೦-೧೧-೯೦ರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)